**ಓ.ಎಸ್. ನಂಃ 173/2022**
**ಡಿ ಡಬ್ಲ್ಯೂಃ 1**

ದಿನಾಂಕಃ 04-12-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿಯ ಪರ ಶ್ರೀ ಎಂ. ಬಿ. ಪಿ ವಕೀಲರಿಂದಃ

ನನಗೆ ಕನ್ನಡ ಓದಲು ಹಾಗೂ ಬರೆಯಲು ಬರುತ್ತದೆ. ವಾದಿ ಸರ್ವೆ ನಂ 585 ರಲ್ಲಿ ತಮಗೆ ಜಾಗ ಬರುತ್ತದೆ ಎಂದು ಈ ದಾವೆ ದಾಖಲಿಸಿದ್ದಾರೆ. ಸರ್ವೆ ನ.585/1 ರಲ್ಲಿ 9 ಎಕರೆ ಜಮೀನು ಇದೆ. ವಾದಿಯೇ ಸದರಿ 9 ಎಕರೆ ಜಮೀನಿನ ಮಾಲಿಕ ಹಾಗೂ ಕಬ್ಜೆದಾರ ಆಗಿರುತ್ತಾರೆ ಎಂದರೆ ಸರಿ. ನನಗೆ ದಾವಾ ಆಸ್ತಿಯ ವಿಸ್ತೀರ್ಣ ಗೊತ್ತಿಲ್ಲ. ವಾದಿ ಈ ದಾವೆಯನ್ನು 40 ಅಡಿ X 51 ಅಡಿ ಜಾಗಕ್ಕೆ ಸಂಬಂಧಿಸಿದಂತೆ ದಾಖಲಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ಅದು ನನ್ನ ಜಾಗದಲ್ಲಿ ಬರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ಪೂರ್ವಕ್ಕೆ ಸರ್ವೆ ನಂ. 585/3 ರಲ್ಲಿನ ಸರಕಾರಿ ಜಾಗ ಇರುತ್ತದೆ ಎಂದರೆ ಸಾಕ್ಷಿ ಸರಿಯಲ್ಲ, 586 ರ ಜಮೀನು ಇದೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂ. 586 ರ ಜಮೀನು ವಾದಿಯ ತಂದೆಯ ಹೆಸರಿನಲ್ಲಿದೆ. ದಾವಾ ಆಸ್ತಿಯ ಪೂರ್ವಕ್ಕೆ ಸರ್ಕಾರಕ್ಕೆ ಸೇರಿದ ಜಾಗ ಇದ್ದು ಅದರಲ್ಲಿ ಶಾಲಾ ಕಟ್ಟಡ ಇರುತ್ತದೆ ಎಂದರೆ ಸರಿಯಲ್ಲ. ವಾದಿಯ ಜಮೀನಿನ ಪೂರ್ವಕ್ಕೆ ಸರ್ಕಾರದವರು ಕಾಂಪೌಂಡ್ ಗೋಡೆ ಕಟ್ಟಿದ್ದಾರೆ ಎಂದರೆ ಸರಿ. ಸದರಿ ಕಾಂಪೌಂಡ್ ಒಳಗೆ ಶಾಲಾ ಕಟ್ಟಡ ಹಾಗೂ ಆವರಣ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮಕ್ಕೆ ಬಸವರಾಜ ರಾಯಕೋಟಿ ರವರ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಾಪನಪಲ್ಲಿ ನಾರಾಯಣರವರ ಜಮೀನು ಇದೆ ಎಂದು ನುಡಿಯುತ್ತಾರೆ. ಸದರಿ ನಾರಾಯಣರವರ ಜಮೀನು ಸರ್ವೆ ನಂಬರು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಗೋವಿಂದಪ್ಪ ಮಜ್ಜಿಗೆ ರವರ ಜಮೀನು ಇದೆ ಎಂದರೆ ಸಾಕ್ಷಿ ಸರಿಯಲ್ಲ, ಸುರೇಶ ಆವಂಟಿ ರವರ ಜಮೀನು ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ದಕ್ಷಿಣಕ್ಕೆ ಗ್ರಾಮ ಠಾಣಾ ಇದೆ ಎಂದರೆ ಸಾಕ್ಷಿ ಸರಿಯಲ್ಲ, ಶರಣಪ್ಪ ಆವಂಟಿ ರವರ ಜಮೀನು ಇದೆ ಎಂದು ನುಡಿಯುತ್ತಾರೆ. ಸದರಿ ಶರಣಪ್ಪ ರವರ ಜಮೀನಿನ ಸರ್ವೆ

ನಂಬರು ನನಗೆ ಗೊತ್ತಿಲ್ಲ. ನಾನು ಹೇಳಿದ ಸದರಿ ಚೆಕ್‌ಬಂದಿಯನ್ನು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿದ್ದೇನೆ.

1 ನೇ ಪ್ರತಿವಾದಿ ನನ್ನ ಅಣ್ಣ ಆಗಿರುತ್ತಾರೆ. ನನ್ನ ಅಣ್ಣನ ಹೆಂಡತಿ ಹಿಂದೆ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು ಎಂದರೆ ಸರಿ. ಸದರಿ ಅವದಿಯಲ್ಲಿ ಪಂಚಾಯತಿಯ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತಿದ್ದೇನು ಎಂದರೆ ಸರಿಯಲ್ಲ. ನನ್ನ ತಂದೆ 2019 ರಲ್ಲಿ ಮರಣ ಹೊಂದಿದ್ದಾರೆ. ನನ್ನ ತಂದೆ ಒಟ್ಟು 3 ಮನೆಗಳನ್ನು ಹೊಂದಿದ್ದರು, ಸದರಿ ಮನೆಗಳು ನನ್ನ ದೊಡ್ಡಪ್ಪನ ಹೆಸರಿನಲ್ಲಿ ಇದ್ದವು. ಸದರಿ 3 ಮನೆಗಳ ಹಾಗೂ ನೀವು ದಾವಾ ಆಸ್ತಿಯಲ್ಲಿ ಕಟ್ಟುತ್ತಿರುವ ಮನೆಯ ನಡುವೆ ಎಷ್ಟು ಅಂತರ ಇದೆ ಎಂದರೆ ಸಾಕ್ಷಿ 4 ಅಡಿ ಬಿಟ್ಟು ಮನೆ ಕಟ್ಟುತ್ತಿದ್ದೆವೆ ಎಂದು ನುಡಿಯುತ್ತಾರೆ. ನಮ್ಮ ಹೊಸ ಮನೆಯ ಚೆಕ್ ಬಂದಿಯನ್ನು ಪ್ರತಿವಾದ ಪತ್ರ ಹಾಗೂ ಪ್ರಮಾಣ ಪತ್ರದಲ್ಲಿ ಬರೆಯಿಸಿದ್ದೇನೆ. ನಾನು ಆ ರೀತಿ ಚೆಕ್‌ಬಂದಿ ಬರೆಯಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಹೊಸ ಮನೆ ಕಟ್ಟಡದ ಪೂರ್ವಕ್ಕೆ ನಮಗೆ ಸೇರಿದ ಖಾಲಿ ಜಾಗ, ಪಶ್ಚಿಮಕ್ಕೆ ಬಾವಿಗೆ ಹೋಗುವ ರಸ್ತೆ ಇದೆ, ಉತ್ತರಕ್ಕೆ ಸರ್ಕಾರಿ ಕಾಂಪೌಂಡ್ ಹಾಗೂ ಆದಾದ ನಂತರ ಗ್ರಂಥಾಲಯ ಇದೆ ಮತ್ತು ದಕ್ಷಿಣಕ್ಕೆ ನಮ್ಮ ಹಳೆಯ ಮನೆ ಇದೆ. ನನ್ನ ತಂದೆ ಹಾಗೂ ಕನಕಪ್ಪ ರವರು ಖರೀದಿಸಿದ ಆಸ್ತಿಯ ನಂಬರು 1/112 ಆಗಿರುತ್ತದೆ. ಸದರಿ ಆಸ್ತಿಯ ಕಂದಾಯ ಪಾವತಿ ರಶೀದಿಗಳನ್ನು ಹಾಜರು ಮಾಡಿದ್ದೇನೆ. ಸದರಿ ಆಸ್ತಿಯನ್ನು ಸುಮಾರು 50 ವರ್ಷಗಳ ಹಿಂದೆ ಖರೀದಿ ಮಾಡಿದ್ದರು. ಸದರಿ ಜಾಗ ನಮ್ಮ ಹಳೆಯ ಮನೆಗೆ ಹೊಂದಿಕೊಂಡು ಇದೆ. ಸದರಿ ಖರೀದಿಗೆ ಸಂಬಂಧಿಸಿದ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ 2007 ರಲ್ಲಿ ಅತಿಯಾದ ಮಳೆ ಆದಾಗ ದಾಖಲೆ ನಾಶವಾಗಿದೆ ಎಂದು ನುಡಿಯುತ್ತಾರೆ. ಈ ರೀತಿ ದಾಖಲೆ ನಾಶ ಆಗಿರುವ ಬಗ್ಗೆ ಪ್ರತಿವಾದ ಪತ್ರ ಹಾಗೂ ನನ್ನ ಪ್ರಮಾಣ ಪತ್ರದಲ್ಲಿ ಬರೆಯಿಸಿಲ್ಲ.

ಹೊಸ ಮನೆ ಕಟ್ಟಲು ಪರವಾನಿಗೆ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಪರವಾನಿಗೆ ಕೇಳಿದ್ದೇವು ಆದರೆ ಸರ್ಕಾರದಿಂದ ಮನೆ ಮಂಜೂರು ಆಗಿರುವುದರಿಂದ ಪರವಾನಿಗೆ ನೀಡಲು ಬರುವುದಿಲ್ಲ ಎಂದು ಪಂಚಾಯಿತಿಯವರು ತಿಳಿಸಿದ್ದರು ಎಂದು ನುಡಿಯುತ್ತಾರೆ. ನಾನು ಪರವಾನಿಗೆ ಕೋರಿ ಪಂಚಾಯಿತಿಗೆ ಲಿಖಿತ ಅರ್ಜಿ ಸಲಿಸಿಲ್ಲ. ನಾನು ಅರ್ಜಿ ಕೊಡದೆ ಪಂಚಾಯಿತಿಯವರು ಪರವಾನಿಗೆ ನೀಡಲು ಬರುವುದಿಲ್ಲ ಎಂದು

ತಿಳಿಸಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ಮನೆ ಕಟ್ಟುವಾಗ ವಾದಿ ತಮ್ಮ ಜಮೀನಿನಲ್ಲಿ ಕಟ್ಟುತ್ತಿದ್ದೇವೆ ಎಂದು ಪಂಚಾಯಿತಿಗೆ ಅರ್ಜಿ ನೀಡಿದ್ದರು ಎಂದರೆ ಸರಿಯಲ್ಲ. ಕೃಷಿ ಜಮೀನಿನಲ್ಲಿ ಮನೆ ಕಟ್ಟುತ್ತಿರುವುದರಿಂದ ನಾವು ಪರವಾನಿಗೆ ನೀಡಿಲ್ಲ ಎಂದು ಪಂಚಾಯತಿಯವರು ವಾದಿಗೆ ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ನಮ್ಮ ಮನೆ ಕಟ್ಟಡ ಮುಗಿದ ನಂತರ ನ್ಯಾಯಾಲಯದಿಂದ ನೋಟಿಸ್ ಬಂದಿತ್ತು ಎಂದು ನುಡಿಯುತ್ತಾರೆ. ಕಟ್ಟಡ ಯಾವ ದಿನಾಂಕದಂದು ಪೂರ್ಣಗೊಡಿದೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ವಾದಿ ಸೆಪ್ಟೆಂಬರ್ 2022 ರಲ್ಲಿ ಈ ದಾವೆ ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-14 ರ ದಾಖಲೆಯ ಪ್ರಕಾರ ದಿನಾಂಕ 02.08.2022 ರಂದು ನಿಮ್ಮ ಮನೆ ಅಡಿಪಾಯದ ಹಂತದಲ್ಲಿತ್ತು ಎಂದರೆ ಸಾಕ್ಷಿ ಸರಿಯಲ್ಲ, ಕಟ್ಟಡ ಪೂರ್ಣಗೊಂಡಿತ್ತು ಎಂದು ನುಡಿಯುತ್ತಾರೆ. ಸದರಿ ನಿಡಿ-14 ರ ದಾಖಲೆಯ ಪ್ರಕಾರ ದಿನಾಂಕ 22.08.2022 ರಂದು ನಿಮ್ಮ ಮನೆ ಲಿಂಟಲ್ ಹಂತದಲ್ಲಿ ಇರುವುದು ಕಂಡುಬರುತ್ತದೆ ಎಂದರೆ ಸಾಕ್ಷಿ ಸರಿ ಎಂದು ನುಡಿಯತ್ತಾರೆ. ಈ ದಾವೆಯನ್ನು ದಾಖಲಿಸುವ ಸಮಯದಲ್ಲಿ ನಮ್ಮ ಮನೆ ಕಟ್ಟಡ ಅಡಿಪಾಯದ ಹಂತದಲ್ಲಿ ಇತ್ತು ಎಂದರೆ ಸರಿಯಲ್ಲ. ನಿಡಿ-14 ರ ಪ್ರಕಾರ ನಿಮ್ಮ ಮನೆಯ ಕಟ್ಟಡ ದಿನಾಂಕ 14.12.2022 ರಂದು ಪೂರ್ಣಗೊಂಡಿರುವುದು ಕಂಡುಬರುತ್ತದೆ ಎಂದರೆ ಸಾಕ್ಷಿ ಸರಿ ಎಂದು ನುಡಿಯುತ್ತಾರೆ. ನಾನು ಸದರಿ ಹೊಸ ಮನೆಯ ಪಂಚಾಯತಿ ಖಾತಾ ನಕಲು ಪ್ರತಿಯನ್ನು ಹಾಜರು ಮಾಡಿಲ್ಲ.

(ಈ ಹಂತದಲ್ಲಿ ಮುಂದುವರೆದು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಗಿದೆ).

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ